ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ಬಿ81/89615/2018-19

ದಿನಾಂಕ : 20 JUN 2019

## ಅಧಿಕೃತ ಜ್ಞಾಪನಾ ಪತ್ರ

ವಿಷಯ: ನಿಗಮದ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ:
1. ಶ್ರೀ.ಮಹಂತಗೌಡ ಬಸವಣ್ಣ ಬಿರಾದಾರ, ನಿವೃತ್ತ ನ್ಯಾಯಾಧೀಶರು ರವರ ದಿನಾಂಕ: 11.03.2019 ರ ಮನವಿ ಪತ್ರ
2. ಶ್ರೀ.ಎನ್.ಬಿ.ಪಾಟೀಲ್, ನಿರ್ದೇಶಕರು, ಸಾರ್ವಜನಿಕ ಸೂಚನಾ ಇಲಾಖೆ, (ನಿವೃತ್ತ) ರವರ ದಿನಾಂಕ: 16.03.2019 ರ ಮನವಿ ಪತ್ರ
3. ಕವಿಪ್ರನಿನಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ21/706/ 97-98 ದಿನಾಂಕ: 29.07.2013.
4. ಕವಿಪ್ರನಿನಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ81/89615 /2018-19 ದಿನಾಂಕ: 08.05.2019

-----

ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಗಮದ ಅಧಿಕಾರಿ/ನೌಕರರ ವಿರುದ್ಧ ಅಗತ್ಯವಿದ್ದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳ ನೌಕರರ (ವರ್ಗೀಕರಣ, ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಬಂಧನೆಗಳು, 1987 ರ ನಿಬಂಧನೆ-11 ರ ಅಡಿಯಲ್ಲಿ ಇಲಾಖಾ ವಿಚಾರಣೆಗಳನ್ನು ನಡೆಸಲು ಕಾಲ ಕಾಲಕ್ಕೆ ನಿವೃತ್ತ ನ್ಯಾಯಾಧೀಶರು/ಅಧಿಕಾರಿಗಳನ್ನು ನೇಮಕಮಾಡಲಾಗಿರುತ್ತದೆ.

ಈ ಕೆಳಕಂಡ ನಿವೃತ್ತ ನ್ಯಾಯಾಧೀಶರು/ ಅಧಿಕಾರಿಗಳು ತಮ್ಮನ್ನು ನಿಗಮದಲ್ಲಿ ವಿಚಾರಣಧಿಕಾರಿಗಳನ್ನಾಗಿ ನೇಮಕಮಾಡಿಕೊಳ್ಳುವಂತೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಸದರಿಯವರ ಮನವಿಗಳನ್ನು ಪರಿಗಣಿಸಿ ನಿಗಮದಲ್ಲಿ ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲು ನಿಗಮದ ಅನುಮೋದನೆಯನ್ನು ಈ ಮೂಲಕ ನೀಡಲಾಗಿದೆ. ಸದರಿ ನಿವೃತ್ತ ನ್ಯಾಯಾಧೀಶರು/ಅಧಿಕಾರಿಗಳು ಪ್ರಸ್ತುತ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳು ಈ ಕೆಳಕಂಡಂತಿರುತ್ತದೆ. ಕವಿಪ್ರನಿನಿಯ ವಲಯ/ವೃತ್ತ/ವಿಭಾಗಗಳಲ್ಲಿ ದಿನಾಂಕ: 08.05.2019 ರ ಅಧಿಕೃತ ಜ್ಞಾಪನಾ ಆದೇಶದಲ್ಲಿ ತಿಳಿಸಿರುವ ವಿಚಾರಣಾಧಿಕಾರಿಗಳೊಂದಿಗೆ ಈ ಕೆಳಕಂಡ ವಿಚಾರಣಾಧಿಕಾರಿಗಳ ಸೇವೆಯನ್ನು ದಿನಾಂಕ:31.12.2020 ರವರೆಗೆ ಹಾಲಿ ಚಾಲ್ತಿಯಲ್ಲಿರುವ ನಿಯಮಗಳನುಸಾರ ಪಡೆಯಬಹುದಾಗಿರುತ್ತದೆ.

AC 21/6/19

Uploaded 21/6/19

| ಕ್ರ.ಸಂ | ಹೆಸರು | ವಿಳಾಸ ಮತ್ತು ಮೊಬೈಲ್ ಸಂಖ್ಯೆ |
|---|---|---|
| 1. | ಶ್ರೀ.ಮಹಂತಗೌಡ ಬಸವಣ್ಣ ಬಿರಾದಾರ,<br>ನಿವೃತ್ತ ನ್ಯಾಯಾಧೀಶರು ಮತ್ತು ಕಾನೂನು ತಜ್ಞರು | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಕೊಠಡಿ ಸಂಖ್ಯೆ: 21, 2 ನೇ ಮಹಡಿ, ಡೈರಿ ವೃತ್ತ, ಸರ್ಕಾರಿ ಐ.ಟಿ.ಐ ಕಾಂಪೌಂಡ್, ಬೆಂಗಳೂರು-29<br><br>ಮೊಬೈಲ್ ಸಂಖ್ಯೆ: 94481-61751<br>ಇಮೈಲ್ ಐಡಿ: mahantbiradar52@gmail.com |

| | | |
|---|---|---|
| 2 | ಶ್ರೀ.ಎನ್.ಬಿ.ಪಾಟೀಲ್, ನಿರ್ದೇಶಕರು, ಸಾರ್ವಜನಿಕ ಸೂಚನಾ ಇಲಾಖೆ, (ನಿವೃತ್ತ). | ಕೆಹೆಚ್‌ಬಿ ಪ್ಲಾಟ್ ನಂ-34, ಶಾಂತಿ ನಗರ, ಕಲಬುರಗಿ.<br><br>ಮೊಬೈಲ್ ಸಂಖ್ಯೆ:96116-18625<br>ಇಮೈಲ್ ಐಡಿ: nbpatil53@gmail.com |

ಇಲಾಖಾ ವಿಚಾರಣೆಗಳನ್ನು ನಡೆಸುವ ವಿಚಾರಣಾಧಿಕಾರಿಗಳಿಗೆ ನಿಗಮದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ21/706/97-98 ದಿನಾಂಕ:29.07.2013 ರ ಆದೇಶದ ಪ್ರಕಾರ ಪರಿಶ್ರಮ ಧನವನ್ನು ನೀಡಬಹುದಾಗಿರುತ್ತದೆ. ಮುಂದುವರೆದಂತೆ ವಿಚಾರಣಾಧಿಕಾರಿಗಳು ತಮ್ಮ ನಿವಾಸ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳದಲ್ಲಿ ಇಲಾಖಾ ವಿಚಾರಣೆಗಳನ್ನು ನಡೆಸುವ ಸಂದರ್ಭಗಳಲ್ಲಿ, ನಿಗಮದ ಪ್ರವರ್ಗ-1 ರ ಅಧಿಕಾರಿಗಳಿಗೆ ನೀಡುವಂತೆಯೇ ದಿನ ಭತ್ಯೆಯನ್ನು ನೀಡತಕ್ಕದ್ದು.

ನಿರ್ದೇಶಕರು(ಆ ಮತ್ತು ಮಾ.ಸಂ)
ಕವಿಪ್ರನಿನಿ

<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:</u>

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ/ಸೆಸ್ಕ್.
2. ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
3. ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
4. ಉಪ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ)/(ತಾಂತ್ರಿಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
5. ವಿಚಾರಣಾಧಿಕಾರಿಗಳು, ಪಟ್ಟಿಯಲ್ಲಿರುವ ವಿಳಾಸಕ್ಕೆ
6. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/ನಿರ್ದೇಶಕರು(ಪ್ರಸರಣ)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

www.kptcl.com/eprasarana for information of:

7. ಅಧೀಕ್ಷಕ ಇಂಜಿನಿಯರ್(ವಿ)ಗಳು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
8. ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗಳು, ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.
9. ವ್ಯವಸ್ಥಾಪಕರು(ವಿಚಾರಣೆಗಳು-1/ಸಿಬ್ಬಂದಿ-1/ಸಿಬ್ಬಂದಿ-2/ಕಾನೂನು/ಆಂತರಿಕ ನಿರ್ವಹಣೆ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಲೆಕ್ಕಾಧಿಕಾರಿ (ಆಂತರಿಕ ತನಿಖೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು